## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

**ಸಿ.ಸಿ. ನಂ. 361/16**

ಚಾ.ಸಾ. 44

ಪ್ರಾ.ಸಾ. 29

| | | |
|---|---|---|
| ಸಾಕ್ಷಿದಾರರ ಹೆಸರು | – | ಮೊಹಮ್ಮದ್ ಶಫಿ ಇಸಾಕ್ ಮುಲ್ಲಾ |
| ತಂದೆಯ ಹೆಸರು | – | ಇಸಾಕ್ ಮುಲ್ಲಾ |
| ವಯಸ್ಸು | – | 50 ವರ್ಷ |
| ಉದ್ಯೋಗ | – | ಶಿಕ್ಷಕ |
| ವಾಸ್ತವ್ಯ | – | ಗುಡಕಾಗಲ್, ಕುಮಟಾ ತಾಲೂಕ |

(ಇಂದು ದಿನಾಂಕಃ 23-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ಆರೋಪಿತರನ್ನು ನೋಡಿದ್ದೇನೆ. 7 ನೇ ಆರೋಪಿ ಶಿಕ್ಷಕನಾಗಿದ್ದರಿಂದ ಅವರ ಪರಿಚಯ ಇತ್ತು. ನಮ್ಮ ಚಿಕ್ಕಪ್ಪನ ಮಗಳು ರೂ. 40,000-00 ಗಳನ್ನು 7 ನೇ ಆರೋಪಿಗೆ ಕೊಟ್ಟಿದ್ದಾಳೆಂದು ನನಗೆ ಹೇಳಿದ್ದಾಳೆ. ಯಾವ ಕಾರಣಕ್ಕಾಗಿ ಕೊಟ್ಟಿದ್ದಾಳೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಹಿರಿಯ ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

7 ನೇ ಆರೋಪಿ ನನ್ನ ಪರಿಚಯಸ್ಥನಿದ್ದು ನನ್ನ ಪರಿಚಯದ ಮೇಲೆ ನನ್ನ ಚಿಕ್ಕಪ್ಪನ ಮಗಳಿಗೆ ಟಿ.ಸಿ.ಹೆಚ್. ಕೋರ್ಸಗೆ ಸೀಟ್ ಸಿಗದೇ ಇರುವ ಕಾರಣ ಆತ ಅವಳಿಗೆ ಟಿ.ಸಿ.ಹೆಚ್. ಕೋರ್ಸಗೆ ಸೇರಿಸಲು 7 ನೇ ಆರೋಪಿತನನ್ನು ವಿಚಾರಿಸಿದಾಗ ಆತ 2 ರಿಂದ 5 ನೇ ಆರೋಪಿತರನ್ನು ಪರಿಚಯಿಸಿದನು ಎಂದರೆ ಸರಿಯಲ್ಲ. ಸದರಿಯವರಿಗೆ ದೊಡ್ಡ ದೊಡ್ಡ ವ್ಯಕ್ತಿಗಳ ಪರಿಚಯ ಇದೆ, ಸದರಿಯವರು ಟಿ.ಸಿ.ಹೆಚ್. ಕೋರ್ಸಗೆ ಸೀಟ್ ಕೊಡಿಸುತ್ತಾರೆ ಮತ್ತು ಬೇರೆ ಬೇರೆ ಇಲಾಖೆಗಳಲ್ಲಿ ಕೆಲಸ ಕೊಡಿಸುತ್ತಾರೆ ಎಂದು ಹೇಳಿ

ಕುಮಟಾದ ಪೈ ಹೋಟೆಲ್‌ನಲ್ಲಿ ನನಗೆ ಪರಿಚಯಿಸಿದರು ಎಂದರೆ ಸರಿಯಲ್ಲ. ನಂತರ ನಾನು ಚಿಕ್ಕಪ್ಪನ ಮಗಳಿಗೆ ಟಿ.ಸಿ.ಹೆಚ್. ಸೀಟ್ ಕೊಡಿಸುವುದಕ್ಕಾಗಿ ರೂ. 40,000-00 ಹಣ ಕೇಳಿದ್ದು ನಾನು ರೂ. 35,000-00 ಕೊಡುವುದಾಗಿಹೇಳಿದ್ದೆನು ಎಂದರೆ ಸರಿಯಲ್ಲ. 7 ನೇ ಆರೋಪಿಯ ಸಮಕ್ಷಮ ನಾನು ರೂ. 35,000-00 ಹಣವನ್ನು ಆರೋಪಿತರಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಂತರ ಆರೋಪಿತರು ನನ್ನ ಚಿಕ್ಕಪ್ಪನ ಮಗಳು ಜೈನುಬಿ ಇವಳ ವರ್ಗಾವಣೆ ಪ್ರಮಾಣಪತ್ರ ಮತ್ತು ಎಸ್.ಎಸ್.ಎಲ್.ಸಿ. ಅಂಕಪಟ್ಟಿಗಳ ಪ್ರತಿಗಳನ್ನು ಪಡೆದುಕೊಂಡುಹೋದರು ಎಂದರೆ ಸರಿಯಲ್ಲ. ಸದರಿಯವರು ನನ್ನ ಚಿಕ್ಕಪ್ಪನ ಮಗಳಿಗೆ ಟಿ.ಸಿ.ಹೆಚ್. ಕೋರ್ಸಗೆಸೀಟನ್ನೂ ಕೊಡಿಸದೇ, ಹಣವನ್ನೂ ಸಹ ಮರಳಿ ಕೊಡದೇ ಮೋಸ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ 31-05-2002 ರಂದು ನನ್ನ ಚಿಕ್ಕಪ್ಪ ---------------- ಕೊಟ್ಟಿರುತ್ತೇನೆ ಎಂದು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿ.ಪಿ.36 ಎಂದು ಗುರುತಿಸಲಾಯಿತು. 7 ನೇ ಆರೋಪಿ ನನ್ನ ಸಹೋದ್ಯೋಗಿಯಾಗಿದ್ದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 7 ನೇ ಆರೋಪಿ ಪರ ವಕೀಲರಿಂದಃ**

ನಮ್ಮ ಚಿಕ್ಕಪ್ಪನ ಮಗಳಿಗೆ ಟಿ.ಸಿ.ಹೆಚ್. ಕೋರ್ಸಗೆ ಸೀಟನ್ನು ಕೊಡಿಸುತ್ತೇನೆಂದು 7 ನೇ ಆರೋಪಿ ನನ್ನ ಚಿಕ್ಕಪ್ಪನ ಮಗಳಿಂದ ಯಾವತ್ತೂ ಹಣ ಪಡೆದಿಲ್ಲ ಅನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ